**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**
**ಸಿ.ಸಿ. 313/2015**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 15**
**ದಿನಾಂಕಃ 12.02.2024** **ಸಿಡಬ್ಲ್ಯೂ 16**

| | |
|---|---|
| ಹೆಸರು | ರಾಧಾ |
| ತಂದೆ ಹೆಸರು | ಮಂಜುನಾಥ |
| ವಯಸ್ಸು | 47 ವರ್ಷ |
| ಉದ್ಯೋಗ | ಅಂಗನವಾಡಿ ಕಾರ್ಯಕರ್ತೆ |
| ವಾಸ ಸ್ಥಳ | ಬಾನುವಳ್ಳಿ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ.6 ರಿಂದ 15 ರವರ ಪರಿಚಯವಿದೆ. ಆರೋಪಿಯ ಪರಿಚಯ ಇದೆ. ನಾನು ಸುಮಾರು 28 ವರ್ಷಗಳಿಂದ ಬಾನುವಳ್ಳಿ ಅಂಗನವಾಡಿಯಲ್ಲಿ ಕಾರ್ಯಕರ್ತೆಯಾಗಿ ಕೆಲಸ ಮಾಡುತ್ತಿದ್ದೇನೆ. ಪ್ರತಿ ತಿಂಗಳ ಎಂ ಪಿ ಆರ್ ಮೀಟಿಂಗ್ ನಡೆಯುತ್ತಿತ್ತು. ಸದರಿ ಮೀಟಿಂಗ್ ನಲ್ಲಿ ಸುಮಾರು 20 ಜನ ಸೇರುತ್ತಿದ್ದರು. ಸದರಿ ಮೀಟಿಂಗ್‌ನಲ್ಲಿ ನಮ್ಮ ಮೇಲ್ವಿಚಾರಕರು ಸಹ ಇರುತ್ತಾರೆ. 2010 ರ ಮಾರ್ಚ ತಿಂಗಳಲ್ಲಿ ಆರೋಪಿ ಬಂದು ನಮ್ಮ ಮೇಲ್ವಿಚಾರಕರ ಅನುಮತಿ ಪಡೆದು ಮೈಕ್ರೋ ಇನ್ಸುರೆನ್ಸ್ ಮಾಡಿಕೊಡುತ್ತೇವೆ ಎಂದು ಹೇಳಿದರು. ಅದರಂತೆ ತಿಂಗಳಿಗೊಮ್ಮೆ, 3 ತಿಂಗಳಿಗೊಮ್ಮೆ ಹಾಗೂ 6 ತಿಂಗಳಿಗೊಮ್ಮೆ ಹಣ ಕಟ್ಟುವುದಾಗಿ ತಿಳಿಸಿದರು. ಅದರಂತೆ ನಾವೆಲ್ಲರೂ ಹಣ ಕಟ್ಟಲು ಒಪ್ಪಿದೆವು. ನಾವು ಪ್ರತಿ ತಿಂಗಳು ಕಟ್ಟಲು ಪ್ರಾರಂಭಿಸಿದೆವು. 2-3 ತಿಂಗಳ ನಂತರ ಬಂದು ನಮ್ಮೆಲ್ಲರಿಗೂ ನಮ್ಮ ಸಂಬಂಧಿಕರಿಗು ಹಾಗೂ ಸಮುದಾಯದ ಜನರಿಗೂ ಮೈಕ್ರೋ ಇನ್ಸುರೆನ್ಸ್ ಮಾಡಿಸುವಂತೆ ಹಾಗೂ 100 ರೂ ಗೆ 6 ರೂ. ಕಮೀಷನ್ ಕೂಡಾ ಕೊಡುತ್ತೇವೆ ಎಂದು ಹೇಳಿದರು. ಅದರಂತೆ ನಾವು ಒಪ್ಪಿದಕ್ಕೆ ನಮಗೆ ಕೆ ಜಿ ಎಂ ಕೋಡ್ ಕೊಡಾ ಕೊಟ್ಟರು. ನನ್ನ ಕೋಡ್ 12 ಇರುತ್ತದೆ. ಒಂದು ವೇಳೆ ತಿಂಗಳಿಗೆ 100 ರೂ. ಕಟ್ಟಿ ತೀರಿಹೋದರೆ 30 ಸಾವಿರ ರೂ. ಸಹಾಯಧನ ಬರುತ್ತದೆ ಎಂದು ಹೇಳಿದರು. ಅದರಂತೆ ನಾನು ನನ್ನ ಕೋಡ್ ನ ಅಡಿಯಲ್ಲಿ 35 ಜನರ ಪಾಲಿಸಿ ಮಾಡಿಸಿದೆ. ಸದರಿ ಹಣವನ್ನು ನಾವು ಜಯಶ್ರೀ ಟಾಕೀಸ್ ರೋಡ್ ನಲ್ಲಿರುವ ಪ್ರಗತಿ ಗ್ರಾಮೀಣ ಬ್ಯಾಂಕ್ ಬಳಿ ಇರುವ ಆರೋಪಿಯ ಕಚೇರಿಗೆ ಹೋಗಿ ಕಟ್ಟಿದ್ದೆವು. ನಾವು ಹಣ ಪಾವತಿಸಿದ ಬಗ್ಗೆ ನಮ್ಮ ಪಾಸ್ ಬುಕ್ ನಲ್ಲಿ ನಮೂದಿಸಿ ಕೊಟ್ಟಿದ್ದರು. ಸದರಿ ಪಾಲಿಸಿಗಳನ್ನು ಹಾಗೂ ಪಾಸ್ ಬುಕ್ ಗಳನ್ನು ಈ ದಿನ ನಾನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದೇನೆ. ಸಾಕ್ಷಿಯು ಹಾಜರುಪಡಿಸಿದ 41 ಪಾಲಿಸಿಗಳನ್ನು ಹಾಗೂ 35 ಪಾಸ್ ಬುಕ್‌ಗಳನ್ನು ಕ್ರಮವಾಗಿ ನಿಪಿ20 (ಒಟ್ಟಾಗಿ 41 ಪಾಲಿಸಿಗಳು )ಮತ್ತು 21 (ಒಟ್ಟಾಗಿ 35 ಪಾಸ್

ಬುಕ್ ಗಳು) ಎಂದು ಗುರುತಿಸಲಾಯಿತು.

ನಾವು ಆರೋಪಿಗೆ ಒಟ್ಟು 20,500/- ರೂಗಳನ್ನು ಕಟ್ಟಿದ್ದು ಆತ ಕೇವಲ 8,400/- ರೂ. ಗಳನ್ನು ಮಾತ್ರ ಎಲ್ ಐ ಸಿ ಕಚೇರಿಗೆ ಕಟ್ಟಿದ್ದು ಉಳಿದ 12,100/- ರೂ. ಗಳನ್ನು ದುರ್ಬಳಕೆ ಮಾಡಿಕೊಂಡಿರುತ್ತಾರೆ. ಸನ್ 2013 ರಲ್ಲಿ ನಾವು ಶಿವಮೊಗ್ಗದಲ್ಲಿರುವ ಎಲ್ ಐ ಸಿ ಕಚೇರಿಯಲ್ಲಿ ವಿಚಾರಿಸಿದಾಗ ಆರೋಪಿ ಕೇಲವ ಒಂದೆರಡು ಕಂತುಗಳನ್ನು ಮಾತ್ರ ಕಟ್ಟಿರುವುದು ತಿಳಿದು ಬಂದಿರುತ್ತದೆ. ಈ ವಿಚಾರವಾಗಿ ನಾವು ಶಿವಮೊಗ್ಗ ಎಲ್ ಐ ಸಿ ಕಚೇರಿಯ ವ್ಯವಸ್ಥಾಪಕರಿಗೆ ದೂರನ್ನು ನೀಡಿರುತ್ತೇವೆ. ಸದರಿ ದೂರನ್ನು ಈಗ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ದೂರನ್ನು ನಿಪಿ.4 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಲಾಯಿತು. ತದ ನಂತರ ನಾವೆಲ್ಲರೂ ಸೇರಿ ಹರಿಹರ ನಗರ ಠಾಣೆಗೆ ಹೋಗಿ ಆರೋಪಿ ಲಿಂಗರಾಜ ಎನ್ನುವವರ ವಿರುದ್ಧ ದೂರು ನೀಡಿರುತ್ತೇನೆ. ದೂರನ್ನು ಈಗಾಗಲೇ ನಿಪಿ.1 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್ ಪಿ ವಕೀಲರಿಂದಃ**

ಆರೋಪಿ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಮಂಜೂರು ಮಾಡಿ ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು
ಮತ್ತು ಜೆಎಂಎಫ್‌ಸಿ, ಹರಿಹರ.